ಶ್ರೀ ಟಿ. ಜಿ. ತಿಮ್ಮೇಗೌಡ.—ತಾವು ಈಗ ಈ ಗಣಿ ಲೈಸೆನ್ಸನ್ನು ಹೊರಗಡೆಯವರಿಗೆ ಕೊಡುವುದಕ್ಕೆ ಬದಲಾಗಿ ನಮ್ಮ ದೇಶದಲ್ಲಿರತಕ್ಕವರಿಗೇ ಲೈಸೆನ್ಸನ್ನು ಕೊಟ್ಟರೆ ಆಗ ನಮ್ಮ ದೇಶದ ಆದಾಯ ಹೆಚ್ಚುವುದಿಲ್ಲವೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಹೆಚ್ಚುತ್ತದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ಗಣಿಗಳ ಮಾಲೀಕರು ಕಡಮೆ ಕೂಲಿಕೊಟ್ಟು ತಮ್ಮ ಗಣಿಗಳ ಕೆಲಸವನ್ನು ನಡೆಸುತ್ತಿರುವುದರಿಂದ ಆ ಕೂಲಿಗಾರರ ಆರೋಗ್ಯದ ಬಾಬಿನ ಬಗ್ಗೆ ಏನಾದರೂ ವ್ಯವಸ್ಥೆಮಾಡಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗಾಗ್ಗೆ ಸರ್ಕಾರಕ್ಕೇನೂ ಮನವಿಗಳು ಬಂದಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—ಒಂದೇ ಹೆಸರಿನಲ್ಲಿ ಮೂರು ನಾಲ್ಕು ಲೈಸೆನ್ಸ್‌ಗಳನ್ನು ಪಡೆದುಕೊಂಡಿರುತ್ತಾರೆಂಬ ಅಂಶ ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿಯಾಗಿ ಪಡೆಯಕೂಡದೆಂದು ಕಾಕೂಸಿನಲ್ಲಿ ಏನೂ ನಿರ್ಬಂಧವಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—1954-55ನೆಯ ಸಾಲಿಗೆ ಯಾರು ಯಾರಿಂದ ಎಷ್ಟೆಷ್ಟು ಆದಾಯ ಸರ್ಕಾರಕ್ಕೆ ಬಂದಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—(1) ಮೆಸರ್ಸ್ ಟಿ. ವಿ. ಚನ್ನಂಜಸೆಟ್ಟೆಪ್ಪ ಅಂಡ್ ಬ್ರದರ್ಸ್, ತುಮಕೂರು—ಇವರಿಂದ ಬಂದಿರತಕ್ಕ ರಾಯಲ್ಟಿ 11,830 ರೂಪಾಯಿಗಳು. (2) ಮೆಸರ್ಸ್ ಜಿ. ಆರ್. ತಿರುವೆಂಗಡಂಚೆಟ್ಟಿಯವರು, ಬೆಂಗಳೂರು — 16,090 ರೂಪಾಯಿಗಳು. (3) ನಾರಾಯಣ್ ಡಿ. ಉಭಯಕರ್ ಅವರಿಂದ 7,450 ರೂಪಾಯಿಗಳು ಬಂದಿವೆ. (4) ಬಿ. ಕೆ. ಆರ್. ಎಜ್. ಸಿಂಗ್ ಅವರಿಂದ 20,100 ರೂಪಾಯಿಗಳು ಬಂದಿವೆ. (5) ಪಿ. ಕೆ. ಸಾರಂಗಪಾಣಿಮೊದಲಿಯಾರ್ ಇವರಿಂದ 27,750 ರೂಪಾಯಿಗಳು ಬಂದಿವೆ. (6) ಮೆಸರ್ಸ್ ಮೈಸೂರು ಸ್ಪೂನ್ ವೇರ್ ಫ್ಯಾಕ್ಟರಿಸ್ ಮತ್ತು ಪಾಟರೀಸ್ ಲಿಮಿಟೆಡ್ ಇವರಿಂದ 22,590 ರೂಪಾಯಿಗಳು ಬಂದಿವೆ. (7) ಎಂ. ರಾಮರಾವ್ ಇವರಿಂದ 1,370 ರೂಪಾಯಿಗಳೂ (8) ಜಿ. ಆನೆಪ್ಪನವರಿಂದ 750 ರೂಪಾಯಿಗಳೂ ಬಂದಿರುತ್ತವೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ಗಣಿಗಳ ಕಾರ್ಯಕ್ರಮವನ್ನೆಲ್ಲಾ ಸರ್ಕಾರದವರೇ ವಹಿಸಿಕೊಂಡು ನಡೆಸಿದರೆ ಇದರಿಂದ ಇನ್ನೂ ಹೆಚ್ಚಿನ ಆದಾಯ ಬರುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ತಮ್ಮ ಅಭಿಪ್ರಾಯದಮಾತು ಆದಾಗ್ಯೂ ಈ ಅಂಶವನ್ನೂ ಪರಿಶೀಲನೆ ಮಾಡುತ್ತೇವೆ.

Import of Silk.

Q.—416. Sri K. V. BYRE GOWDA (Bangalore North).—

Will the Government be pleased to state :—

(*a*) the quantity of silk (pure and artificial) imported into the State for the last two years, and the cost thereof ;

(*b*) whether Government have taken any steps to minimise the import of silk to the State in the interest of State sericulturists ;

(*c*) whether Government have taken steps to improve the quality of silk produced in the State comparable with the imported pure silk ?

A.—Sri H. SIDDAVEERAPPA (Minister for Home).—

(*a*) *Description.*		*Quantity in lbs.*
1. Art silk	...	70,230·45
2. Raw silk	...	18,021·32
Total import	...	88,251·77

		Value. Rs.	a.	p.
1. Art silk	...	2,03,771	4	11
2. Raw silk	...	3,71,632	0	0
Total import	...	5,75,403	4	11

(*b*) Yes.

(*c*) Yes.

ಶ್ರೀ ಕೆ. ವಿ. ಬೈರೇಗೌಡ.—ಪರದೇಶದಿಂದ ರೇಷ್ಮೆ ತರಿಸತಕ್ಕ ಬಗ್ಗೆ ಕಳೆದ ಎರಡು ವರ್ಷಗಳಿಂದ ಎಷ್ಟು ಪೊಬಲಗನ್ನು ಖರ್ಚು ಮಾಡಲಾಗಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಸಂಸ್ಥಾನದಲ್ಲಿ ಉತ್ಪತ್ತಿಯಾಗತಕ್ಕದ್ದು ಇಲ್ಲಿನ ನೆಯ್ಗೆಯವರಿಗೆ ಸಾಕಷ್ಟಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದಾಗ್ಯೂ ಕೆಲವು ನೆಯ್ಗೆಯವರ ಒತ್ತಾಯಕ್ಕಾಗಿ ತರಿಸಬೇಕಾಗಿದೆ.

ಶ್ರೀ ಕೆ. ವಿ. ಬೈರೇಗೌಡ.—ಈ ರೀತಿ ಪರದೇಶದ ಮಾಲನ್ನು ತರಿಸಿದ್ದರಿಂದ ನಮ್ಮ ಸ್ವದೇಶಿ ಮಾಲಿನ ಬಳಕೆ ಕಡಮೆ ಆಗುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಹೇಳುವುದಕ್ಕಾಗುವುದಿಲ್ಲ. ಈ ದಿವಸ ಇಂಡಿಯಾ ಕೊಕೂನ್ ಮಾರ್ಕೆಟ್ಟಿನಲ್ಲಿ ಮಾರಾಟ ಆಗಬೇಕಾದುದಕ್ಕಿಂತ ಮೂರು ಲಕ್ಷ ಮಿಲಿಯನ್ ಪೌಂಡ್ ರೇಷ್ಮೆ ಕಡಮೆ ಮಾರಾಟವಾಗಿದೆ ಎಂದು ಅಂದಾಜು ಮಾಡಿರುತ್ತಾರೆ. ಆದರೆ ನಮ್ಮಲ್ಲಿರುವ ನೆಯ್ಗೆಯವರಲ್ಲಿ ಕೆಲವರು, ಈ ನೆಯ್ಗೆಕೆಲಸಮಾಡತಕ್ಕವರೂ ಮತ್ತು ಜರೀಕೆಲಸಮಾಡತಕ್ಕವರೂ, ಆ ಹೊರಗಿನ ರೇಷ್ಮೆಯನ್ನು ತರಿಸಲೇಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಅವರಿಗೋಸ್ಕರವಾಗಿ ಅವರ ಉದ್ಯೋಗ ಕೆಡದಿರಲೆಂದು ತರಿಸಲಾಗುತ್ತಿದೆ.

*Asterisk indicates that the speech has not been revised by the Member concerned.

ಶ್ರೀ ಕೆ. ಎ. ಬೈರೇಗೌಡ.—ಇಲ್ಲಿ ಬೆಳೆಯತಕ್ಕ ರೈತರ ರೇಷ್ಮೆಗೇನು ಪ್ರೊಟೆಕ್ಷ್ ಕೊಟ್ಟಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಎರಡನ್ನೂ ಸಮನ್ವಯ ಮಾಡಿಕೊಂಡು ಹೋಗುತ್ತಿದ್ದೇವೆ.

ಶ್ರೀ ಕೆ. ಎ. ಬೈರೇಗೌಡ.—ತಾವು ಕೇಂದ್ರ ಸರ್ಕಾರದಿಂದ ಈ ರೇಷ್ಮೆ ವ್ಯವಸಾಯಗಾರರ ಅಭಿವೃದ್ಧಿಗೆ ಏನೇನು ಸಹಾಯ ಕೇಳಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ತಮಗೆ ಆ ವಿಚಾರವನ್ನು ಉತ್ತರದಲ್ಲೇ ತಿಳಿಸಿದ್ದೇನೆ. ಕೇಂದ್ರ ಸರ್ಕಾರದವರು ಮೈಸೂರು ಸಿಲ್ಕ್ ಇಂಪ್ರೂವ್‌ಮೆಂಟಗೋಸ್ಕರವಾಗಿ ಇದುವರೆಗೆ ಎಷ್ಟು ಹಣ ಕೊಟ್ಟಿದ್ದಾರೆಂದರೆ 13 ಚಿಲ್ಲರೆ ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಅವರು ಸೂಚಿಸಿರತಕ್ಕ ರೀತಿಯಲ್ಲಿ 28 ವಿಧವಾದ ಸ್ಕೀಮುಗಳಿರುತ್ತವೆ. ಪ್ರತಿಯೊಂದು ಸ್ಕೀಮಿಗೂ ಎಷ್ಟು ಹಣ ಕೊಟ್ಟಿದ್ದಾರೆ, ಆ ಪೈಕಿ ಎಷ್ಟು ಹಣ ಖರ್ಚಾಗಿದೆ, ಎಂಬುದಕ್ಕೆಲ್ಲಾ ದಾಖಲೆಗಳಿವೆ. ಈಗ ನಮ್ಮಲ್ಲಿ ಒಂದು ಕಕೂನ್ ಮಾರ್ಕೆಟ್ಟನ್ನು ಸ್ಥಾಪಿಸಬೇಕೆಂದು 10 ಲಕ್ಷ ರೂಪಾಯಿಗಳನ್ನು ಕೇಳಿದ್ದೇವೆ. ಈಗಾಗಲೇ ಈ ವಿಚಾರ ಒಂದು ಅಂತಿಮ ಘಟ್ಟಕ್ಕೆ ಬರುತ್ತಿದೆಯೆಂದು ಗೊತ್ತಾಗಿದೆ. ಇದಕ್ಕಾಗಿ 5 ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಕೇಳಿದ್ದೇವೆ. ಮಂಜೂರಾಗಬಹುದು. ರೀಜನಲ್ ಇಂಡಸ್ಟ್ರೀಸ್‌ಗೆ ಏನೇನು ಸಹಾಯ ಸೌಲಭ್ಯಗಳನ್ನು ಒದಗಿಸಿದ್ದಾರೋ ಅವುಗಳನ್ನೆಲ್ಲಾ ಇದಕ್ಕೂ ಅನ್ವಯಿಸುವಹಾಗೆ ಮಾಡಬೇಕೆಂದು ಕೇಳಿದ್ದೇವೆ. ಹೀಗೆ ಆ ಕೇಂದ್ರ ಸರ್ಕಾರದವರು ಈ ರೇಷ್ಮೆ ಕೈಗಾರಿಕೆಯ ಬಗ್ಗೆ ವಿಪುಲವಾಗಿ ಸಹಾಯ ಮಾಡಿದ್ದಾರೆ.

ಶ್ರೀ ಕೆ. ಎ. ಬೈರೇಗೌಡ.—ಕೋಲಾರ ಮತ್ತು ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ seedನ್ನು ಕಂಟ್ರೋಲ್ ಮಾಡಿದಮೇಲೆ ವಿಪರೀತ ಬೆಳೆ ಕೆಡುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆರೀತಿ ಆಗಿತ್ತು. ಅದನ್ನು technical examination ಮಾಡಿಸಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿದ್ದ ಹಾಗೆ ದೇಶದಲ್ಲಿ ಬೇಕಾಗಿರತಕ್ಕ ಮೊಟ್ಟೆಗಳನ್ನು ಸರ್ಕಾರದವರು ಕೊಡುವುದಕ್ಕೆ ಆಗಿಲ್ಲ. ನಮಗೆ 24 ಲಕ್ಷ excess ಬೇಕು. ಈಗ 18 ಲಕ್ಷದ ಮಟ್ಟಿಗೆ supply ಮಾಡುತ್ತಿದ್ದಾರೆ. ಇನ್ನು 6 ಲಕ್ಷ private ನವರು ಕೊಡುತ್ತಾರೆ. ಸಾಮಾನ್ಯವಾಗಿ ರೈತರು ಯಾವ ಬೆಳೆ ಇಟ್ಟರೂ ಕೆಟ್ಟುಹೋಗುತ್ತದೆ. ಅದರಿಂದ ಏತಕ್ಕೋಸ್ಕರ ಹಾಗಾಗಿದೆ ಎಂಬುದನ್ನು ನೋಡಿ ಜಾಗ್ರತೆಯಾಗಿ technical opinion ತೆಗೆದು ಕೊಂಡು ನರಿಪಡಿಸುತ್ತೇವೆ.

ಶ್ರೀ ಕೆ. ಎ. ಬೈರೇಗೌಡ.—ಕೋಲಾರ, ಬೆಂಗಳೂರುಗಳಲ್ಲಿ ಪೂರ್ತಿ ಬೆಳೆಗಳು ಕೆಟ್ಟು ಹೋಗಿವೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಕೊಡಿಗೇನಳ್ಳಿಯಲ್ಲ ಆರೀತಿ ಆಗಿದೆ ಎಂದು ವರದಿ ಬಂದಿದೆ. ಅದನ್ನು ನರಿಪಡಿಸುವುದಕ್ಕೆ ಸಾಕಾದಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ. ಎ. ಬೈರೇಗೌಡ.—ಕೇಂದ್ರ ಸರ್ಕಾರದವರು ಕೊಟ್ಟಿರುವ 15 ಲಕ್ಷ ರೂಪಾಯಿ ಮೊಬಲಗನ್ನು ಆಯಾ ವರ್ಷವೇ ಖರ್ಚು ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆದಷ್ಟು ಖರ್ಚುಮಾಡಿದ್ದೇವೆ. ಅದು non-lapsable grant.

ಶ್ರೀ ಬಿ. ರಾಚಯ್ಯ.—ಎಲ್ಲೆಲ್ಲ ಮೊಟ್ಟೆಗಳನ್ನು supply ಮಾಡಿದ್ದೀರೋ ಅಂಥ ಕಡೆ ಸರಿಯಾದ ಬೆಳೆ ಆಗಿದೆಯೇ ಇಲ್ಲವೇ ಎಂಬ ಬಗ್ಗೆ inspectorನ್ನು ನೇಮಕಮಾಡಿ ವರದಿಯನ್ನು ತರಿಸಿಕೊಂಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ತರಿಸುತ್ತೇವೆ.

ಶ್ರೀ ಕೆ. ಎ. ಬೈರೇಗೌಡ.—ಆ ವರದಿಯ ಪ್ರಕಾರ aided grainages ಕೊಡುವ ಮೊಟ್ಟೆಗಳಲ್ಲಿ ಎಷ್ಟು ಪ್ರಮಾಣದಲ್ಲಿ ಒಳ್ಳೆ ಬೆಳೆ ಆಗಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಶೇಕಡಾ 10-15 ಭಾಗ fail ಆಗಿದೆ ಎಂದು ವರದಿ ಬಂದಿದೆ.

ಶ್ರೀ ಕೆ. ಎ. ಬೈರೇಗೌಡ.—13 ಲಕ್ಷ ರೂಪಾಯಿಗಳನ್ನು ಇದುವರೆಗೂ ಹಂಚಿದ್ದೇವೆ ಎಂದು ಹೇಳಿದ್ದೀರಿ. ಈಗಾಗಲೇ ಮೂರು ವರ್ಷಗಳು ಕಳೆದು ಬಂದರೂ ಕಕೂನ್ ಮಾರ್ಕೆಟ್ ತೆರೆಯುವುದಕ್ಕೆ ಪ್ರಯತ್ನಮಾಡುವುದರಲ್ಲೇ ಇದ್ದೀರಿ. ಇದಕ್ಕೆ ಇನ್ನು ಎಷ್ಟು ವರ್ಷಗಳು ಬೇಕು ?

ಶ್ರೀ ಎಚ್. ಸಿದ್ದವೀರಪ್ಪ.—ವರ್ಷಗಳು ಬೇಕಾಗಿಲ್ಲ; ಹಣ ಒದಗಿಸುವ ಪ್ರಯತ್ನ ನಡೆಯುತ್ತಿದೆ. ಹಣವನ್ನು ಯಾವಾಗ ಬೇಕಾದರೂ ಖರ್ಚುಮಾಡುತ್ತೇವೆ.

ಶ್ರೀ ಕೆ. ಎ. ಬೈರೇಗೌಡ.—ಪೂರ್ಣವಾಗಿ ರೇಷ್ಮೆ ವ್ಯವಸಾಯದ ವಿಚಾರ ತಮಗೆ ಅರ್ಥವಾಗುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನಾನು ಸರ್ವಜ್ಞನಲ್ಲದಿದ್ದರೂ ನನಗೆ ಈ ವಿಚಾರದಲ್ಲಿ ಸಾಕಾದಷ್ಟು ವ್ಯವಹಾರ ಜ್ಞಾನವಿದೆ.

ಶ್ರೀ ಕೆ. ಎ. ಬೈರೇಗೌಡ.—ಕಕೂನ್ ಮಾರ್ಕೆಟ್‌ಗಳ ಏರುಪೇರುಗಳಿಂದ ಮತ್ತು ಕಕೂನ್ ಮಾರ್ಕೆಟ್‌ಗಳನ್ನು ನಿಗದಿಮಾಡದೇ ಇರುವುದರಿಂದ ಎಷ್ಟೋ ಜನ ರೈತರು ಹಾಳಾಗಿ ಹೋಗಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ರೈತರು ಹಾಳಾಗಿ ಹೋಗುವುದನ್ನು ಸರ್ಕಾರದವರು ಅವರ ಪ್ರಯತ್ನದಿಂದ ನಿಲ್ಲಿಸಿದ್ದಾರೆ ಎಂಬುದು ಗಮನಕ್ಕೆ ಬಂದಿದೆ.

ಶ್ರೀ ಎಂ. ರಾಜಶೇಖರಮೂರ್ತಿ.—ಕೇಂದ್ರ ಸಿಲ್ಕ್ ಬೋರ್ಡಿನಿಂದ ಹದಿನಾರು ಲಕ್ಷ ರೂಪಾಯಿಗಳು ಬಂದಿವೆ ಎಂದು ಹೇಳಿದ್ದೀರಿ. ಅದರಲ್ಲಿ ಈಗ ಎಷ್ಟು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ನನ್ನಲ್ಲಿ ಈಗ ಆ ವಿವರಗಳು ಇಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ.—ಹದಿನಾರು ಲಕ್ಷ ರೂಪಾಯಿಗಳಲ್ಲಿ ಐದು ವರ್ಷಗಳಿಂದ ಮೂರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ. ಮೈಸೂರು ಸರ್ಕಾರದವರು ಸರಿಯಾಗಿ ಕಾರ್ಯಕ್ರಮ ತೆಗೆದು ಕೊಂಡಿಲ್ಲ ಎಂದು ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ಪತ್ರ ಬಂದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ಹೇಳುವುದು ಸತ್ಯಾಂಶಕ್ಕೆ ದೂರವಾಗಿದೆ.

ಶ್ರೀ ಎಂ. ರಾಜಶೇಖರಮೂರ್ತಿ.—ಕೇಂದ್ರ ಸರ್ಕಾರದವರಿಗೆ ಹದಿನಾರು ಲಕ್ಷ ರೂಪಾಯಿಗಳಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿದ್ದೀರೆಂದು ಹೇಳಲಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಇದುವರೆಗೂ ಖರ್ಚು ಆಗಿರುವುದಲ್ಲದೆ ಈ ವರ್ಷದಲ್ಲಿ ಸುಮಾರು ಎಂಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದ್ದೇವೆ.

ಶ್ರೀ ಎಂ. ರಾಜಶೇಖರಮೂರ್ತಿ.—ಮುಂದೆ ಎಷ್ಟು ಖರ್ಚಾಗುತ್ತದೆ ಎನ್ನುವ ಪ್ರಶ್ನೆಯಲ್ಲ. ಈಗ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವುದೇ ನನ್ನ ಪ್ರಶ್ನೆ.

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ಖರ್ಚಾಗಿದೆ ಎಂಬ ಲೆಕ್ಕ ತಿಳಿದುವಾಗ ಎಷ್ಟು ಖರ್ಚು ಮಾಡುವುದಕ್ಕೆ ಸಾಧ್ಯ ಎಂಬುದನ್ನು ಸೂಚನೆ ಮಾಡಿದ್ದೇವೆ.

ಶ್ರೀ ಎಂ. ರಾಜಶೇಖರಮೂರ್ತಿ.—Development ಸ್ಕೀಂಗಳನ್ನು ಜಾಗ್ರತೆ ಕಾರ್ಯಗತ ಮಾಡುವುದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಅನಾವಶ್ಯಕ. ಈಗಿರುವ ಸಿಬ್ಬಂದಿಯೇ ಸಾಕು.

ಶ್ರೀ ಎಂ. ರಾಜಶೇಖರಮೂರ್ತಿ.—ಕೇಂದ್ರ ಸಿಲ್ಕ್ ಬೋರ್ಡಿನವರು ಸ್ಪೆಷಲ್ ಆಫೀಸರನ್ನು ನೇಮಕ ಮಾಡುವ ವಿಷಯದಲ್ಲಿ ಕೂಡಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದೂ ಪ್ಯೂನೂರು ಸರ್ಕಾರದವರು ಏನೂ ಖರ್ಚು ಮಾಡಬೇಕಾಗಿಲ್ಲ ಎಂದೂ ಹೇಳಲಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಹೇಳಲಿಲ್ಲ. ಸ್ಕೀಂ ಪ್ರಕಾರ ನಾವು ಯಾವ ಯಾವ ಸ್ಕೀಮನ್ನು ಜಾರಿಗೆ ಕೊಡಬೇಕೋ ಅದನ್ನೆಲ್ಲಾ ಕಾರ್ಯರೂಪಕ್ಕೆ ತರಬೇಕೆಂದು ಹೇಳಿದ್ದಾರೆ. ಅದನ್ನು ಜಾರಿಗೆ ತರುತ್ತೇವೆ ಎಂದು ಭರವಸೆಯನ್ನು ನಾವು ಕೊಟ್ಟಿದ್ದೇವೆ.

ಶ್ರೀ ಎಂ. ರಾಜಶೇಖರಮೂರ್ತಿ.—ಕಾರ್ಯಕ್ರಮಗಳನ್ನು ಪೂರ್ತಿಯಾಗಿ ಜಾರಿಗೆ ತರುವುದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡಿದರೆ, ಸ್ಪೆಷಲ್ ಆಫೀಸರಿಗೆ ಆಗುವ ಖರ್ಚನ್ನು ಪೂರ್ತಿಯಾಗಿ ಸೆಂಟ್ರಲ್ ಸಿಲ್ಕ್ ಬೋರ್ಡಿನವರು ವಹಿಸಿಕೊಳ್ಳುತ್ತಾರೆ ಎಂದು ಹೇಳಲಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ನನ್ನ ಗಮನಕ್ಕೆ ಅದು ಬರಲಿಲ್ಲ.

ಶ್ರೀ ಯು. ಎಂ. ಮಾದಪ್ಪ.—ದೇಶದಲ್ಲಿ ಸಿಲ್ಕ್ ಉತ್ಪತ್ತಿಯಿಂದ ಬಟ್ಟೆ ಮಾಡುವುದಕ್ಕೆ ಅವಕಾಶ ವಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಬೇಕಾದಷ್ಟು stock ಇದೆ.

ಶ್ರೀ ಯು. ಎಂ. ಮಾದಪ್ಪ.—ಸಿಲ್ಕ್ ಹೊರಗಡೆ ಹೋಗುತ್ತದೆಯೇ ಅಥವಾ stock ಹಾಗೆಯೇ ಬಿದ್ದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಸಿಲ್ಕ್ ವಿಚಾರ ಮಾನ್ಯ ನದನ್ಯರಿಗೆ ಗೊತ್ತಿದ್ದಹಾಗೆ supply ಇದೆ, demand ಇಲ್ಲ. ನಮ್ಮ ಕಾರ್ಖಾನೆಹಳ್ಳಿಯಲ್ಲಿ ಏನು ಮಾಡಬೇಕು ಎಂದು ಗೊತ್ತಿಲ್ಲದೆ, ಗವರ್ನ್‌ಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿಗೆ ಅದನ್ನು ತೆಗೆದುಕೊಂಡು ಖರ್ಚುಮಾಡುತ್ತಿದ್ದೇವೆ. The difficulty is, under the existing circumstances, we are not able to sell all the silk that we are manufacturing in this country.

ಶ್ರೀ ಯು. ಎಂ. ಮಾದಪ್ಪ.—ಅದಕ್ಕೋಸ್ಕರ ಬಟ್ಟೆ ಮಾಡಲು ಒಂದು ಸ್ಕೀಮನ್ನು ತಯಾರು ಮಾಡುವುದಕ್ಕೆ ಅವಕಾಶವಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು examine ಮಾಡಬೇಕು.

ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದರೆ handloom weaversಗೆ artificial silkನ್ನು ಹೊರಗಡೆಯಿಂದ ತರಿಸಿ ಏತಕ್ಕೆ ಕೊಡುತ್ತೀರಿ? ನಮ್ಮ ಸಿಲ್ಕ್‌ನ್ನು ಕೊಡುವುದಕ್ಕೆ ಏನು ತೊಂದರೆ ಇದೆ?

Sri H. SIDDAVEERAPPA.—So far as that is concerned, it is better the House knows that the Mysore Government are not the sole masters of the situation. The import and export policy is controlled and regulated by the Government of India. Artificial silkನ್ನು ಹೊರಗಡೆಯಿಂದ import ಮಾಡುವುದಲ್ಲದೆ, ನಮ್ಮ ದೇಶದಲ್ಲಿಯೇ ನಾಲ್ಕು-ಐದು artificial silk ಕಾರ್ಖಾನೆಗಳಿವೆ. Artificial silkನ ಧಾರಣೆ ಕಡಮೆಯಾಗಿರುವುದರಿಂದಲೂ purchasing power ಕಡಮೆಯಾಗಿರುವುದರಿಂದಲೂ ಸಾಮಾನ್ಯವಾಗಿ middle class, low class people ಅದನ್ನು ತೆಗೆದುಕೊಳ್ಳುತ್ತಾರೆ. ನಮ್ಮ ಸಿಲ್ಕಿನ ಬೆಲೆ ಮೂವತ್ತು ರೂಪಾಯಿ ಅದರೆ ಇದರ ಬೆಲೆ ಐದು-ಆರು ರೂಪಾಯಿಗಳಿರುತ್ತವೆ.

ಶ್ರೀ ಯು. ಎಂ. ಮಾದಪ್ಪ.—ಇದು ಗೃಹ ಕೈಗಾರಿಕೆಗಳಲ್ಲೊಂದಾಗಿದೆ. ಈಗಿರುವಂತೆ ಇದನ್ನು ಮುಂದು ವರಿಸಿದರೆ, ಈ ಕೈಗಾರಿಕೆಗೆ ಧಕ್ಕೆ ಬರುವುದಿಲ್ಲವೇ?

Sri H. SIDDAVEERAPPA.—I have suggested to the Government of India that at some stage or other we have to subsidise it like Khadi Industry.

ಶ್ರೀ ಜಿ. ಪಾಪಣ್ಣ.—ಗವರ್ನ್‌ಮೆಂಟ್ ಸಿಲ್ಕ್ ಫಿಲೇ ಚರ್‌ನಲ್ಲಿ ತಯಾರಾಗುವ ರೇಷ್ಮೆಯನ್ನು ಜೆಸ್ಟು ಮಾಡುತ್ತಾ, ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—I will enquire.

ಶ್ರೀ ಜಿ. ಪಾಪಣ್ಣ.—ಗವರ್ನ್‌ಮೆಂಟ್ ಸಿಲ್ಕ್ ಫಿಲೇ ಚರ್‌ನಲ್ಲಿ ತಯಾರಾದ ರೇಷ್ಮೆಯನ್ನು ಸರ್ಕಾರದ ವೀವಿಂಗ್ ಫ್ಯಾಕ್ಟರಿಯಲ್ಲಿ ತೆಗೆದುಕೊಳ್ಳುತ್ತಾ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—To relieve the congestion ಅದನ್ನು ಕೊಂಚುಕೊಳ್ಳಬೇಕೆಂದು ಸಲಹೆ ಮಾಡಿದ್ದೇವೆ.

Sites for Harijans of Mudagur.

Q.—580. Sri SIDDIAH *alias* KUNNIAH (Gundlupet-Heggadadevanakote—Scheduled Castes).—

Will the Government be pleased to state:—

(*a*) (i) whether they have received any application from the Harijans of Mudagur Village, Gundlupet Taluk for the acquisition of land for house sites; (ii) if so, the survey number of the land;

(*b*) (i) whether it is true that their application has been rejected; (ii) by whom it was done; and (iii) the reasons for the same;

(*c*) (i) the number of Harijan families in the said village; (ii) the number of them who have houses, the number of them who have no houses;